**ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.**

**ಎಸ್.ಸಿ ಸಂಖ್ಯೆ:–** 255/2023

| | | |
|---|---|---|
| **ಸಾಕ್ಷಿದಾರನ ಹೆಸರು** | : ಶಿವನಂಜ ಶೆಟ್ಟಿ ಸಿ. | **ಪಿ.ಡಬ್ಲ್ಯೂ:–** 18 |
| **ತಂದೆಯ /ಗಂಡನ ಹೆಸರು** | : ಲೇಟ್ ಚಿಕ್ಕಸುಬ್ಬಶೆಟ್ಟಿ | **ಸಿ.ಡಬ್ಲ್ಯೂ:–** 30 |
| **ವಯಸ್ಸು** | : 49 ವರ್ಷ | |
| **ಉದ್ಯೋಗ** | : ಸಿಪಿಐ, ಮೈಸೂರು ಗ್ರಾಮಾಂತರ ವೃತ್ತ ಕಚೇರಿ, ಮೈಸೂರು | |
| **ವಾಸಸ್ಥಳ** | : ಮೈಸೂರು | |

**ಸಾಕ್ಷಿಯನ್ನು ಈ ದಿನ ದಿಃ24.01.2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ- ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

1. ನಾನು ದಿಃ–31.03.2021 ರಿಂದ 04.10.2023 ರವರೆಗೆ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಆರಕ್ಷಕ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿಃ–01.06.2023 ರಂದು ಸದರಿ ಪ್ರಕರಣದ ಪಿರ್ಯಾದುದಾರರಾದ ಚಾ.ಸಾಃ1 ರವರು ಠಾಣೆಗೆ ರಾತ್ರಿ 8 ಗಂಟೆಗೆ ಹಾಜರಾಗಿ ಲಿಖಿತ ದೂರನ್ನು ನೀಡಿದ್ದು, ಅದನ್ನು ಸ್ವೀಕರಿಸಿ, ಠಾಣಾ ಮೊಕದ್ದಮೆ ಸಂಖ್ಯೆ:– 113/2023 ಕಲಂ 302 ಸಹವಾಚಕ 34 ಐಪಿಸಿ ಅಡಿಯಲ್ಲಿ ಪ್ರಕರಣದ ದಾಖಲಿಸಿ ಪ್ರಥಮ ವರ್ತಮಾನ ವರದಿಯನ್ನು ಇಲಾಖಾ ಮೇಲಾಧಿಕಾರಿಗಳಿಗೆ ಮತ್ತು ಘನ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿಯು ದೂರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–1 ಎಂದು,

ಸಾಕ್ಷಿಯ ಸಹಿಯನ್ನು ನಿಶಾನೆ ಪಿ–1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಪ್ರಥಮ ವರ್ತಮಾನ ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–30 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–30(ಎ) ಎಂದು ಗುರುತಿಸಲಾಯಿತು.

**3.** ನಂತರ ಸದರಿ ಪ್ರಕರಣದ ತನಿಖೆ ಮುಂದುವರೆಸಿ, ಮಹಿಳಾ ಪಿಎಸ್.ಐ ಕಮಲಾಕ್ಷಿ ಹಾಗೂ ಸಿಬ್ಬಂದಿಗಳೊಂದಿಗೆ ಕೃತ್ಯ ನಡೆದ ಸ್ಥಳವಾದ ಹುಣಸನಾಳು ಗ್ರಾಮಕ್ಕೆ ಹೋಗಿರುತ್ತೇವೆ. ಅಲ್ಲಿ ಬಸಮ್ಮ ಎಂಬುವವರ ಮನೆಯ ಬಳಿ ಹೋದಾಗ ಅಲ್ಲಿ ಬಸಮ್ಮರವರು ಕೂತಿದ್ದು, ರಾತ್ರಿ ಸುಮಾರು 9.15 ಗಂಟೆ ಸಮಯದಲ್ಲಿ ಸದರಿ ಬಸಮ್ಮರವರನ್ನು ಮಹಿಳಾ ಪಿಎಸ್.ಐ ರವರ ಸಹಾಯದಿಂದ ವಶಕ್ಕೆ ಪಡೆದುಕೊಂಡು ನಂತರ ಸದರಿ ಕೃತ್ಯ ನಡೆದ ಮನೆಯ ಬಳಿ ಗ್ರಾಮಸ್ಥರು ಸೇರಿದ್ದು, ಮನೆಯ ಒಳಗಡೆ ಹೋಗಿ ನೋಡಲಾಗಿ ಮೃತ ಚಿಕ್ಕರಾಚಶೆಟ್ಟಿ ಎಂಬುವವರು ರಕ್ತದ ಮಡುವಿನಲ್ಲಿ ಕೊಲೆ ಆಗಿ ಬಿದ್ದಿರುವುದು ಕಂಡು ಬಂದಿರುತ್ತದೆ. ಸದರಿ ಸ್ಥಳಕ್ಕೆ ಪಿಸಿಃ–547 ರವರನ್ನು ಬೆಂಗಾವಲಿಗೆ ನೇಮಿಸಿ ಆರೋಪಿ ಬಸಮ್ಮರವರನ್ನು ಕರೆದುಕೊಂಡು ರಾತ್ರಿ 9.40 ಗಂಟೆಗೆ ಠಾಣೆಗೆ ವಾಪಸ್ಸು ಬಂದು ಅವರ ವಿರುದ್ಧ ವಿಚಾರಣೆ ಕೈಗೊಂಡು, ವಿಚಾರಣಾ ಸಮಯದಲ್ಲಿ ಆರೋಪಿತೆ ಬಸಮ್ಮ ಮತ್ತು ಆಕೆಯ ಮಗ ಶಿವನಾಗುರವರು ಆಸ್ತಿಯ ವಿಚಾರದಲ್ಲಿ ಚಿಕ್ಕರಾಚಶೆಟ್ಟಿಯನ್ನು ರಿಪೀಸ್ ಪಟ್ಟಿ, ಗುಂಡು ಕಲ್ಲು ಮತ್ತು ಮಚ್ಚಿನಿಂದ ಹೊಡೆದು ಕೊಲೆ ಮಾಡಿರುವುದಾಗಿ ಹೇಳಿಕೆ ನೀಡಿರುತ್ತಾರೆ. ನಂತರ ಆರೋಪಿತೆ ಬಸಮ್ಮರವರ ವಿರುದ್ಧ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ.

**4.** ನಂತರ ಆರೋಪಿತೆ ಬಸಮ್ಮ ಹಾಗೂ ಪಿರ್ಯಾದುದಾರ ಚಾ.ಸಾಃ1 ರವರ ಜೊತೆಗೆ ಕೃತ್ಯ ನಡೆದ ಸ್ಥಳಕ್ಕೆ ವಾಪಸ್ಸು ಹೋಗಿ, ಕೃತ್ಯ ನಡೆದ ಸ್ಥಳವನ್ನು ಚಾ.ಸಾಃ1 ರವರು ಮತ್ತು ಆರೋಪಿತೆ ತೋರಿಸಿದ್ದು, ಪಂಚರಾದ ಚಾ.ಸಾಃ3 ಮತ್ತು 4 ರವರ ಸಮಕ್ಷಮ ರಾತ್ರಿ 11.10 ಗಂಟೆಯಿಂದ 12.30 ರವರೆಗೆ ಮಹಜರ್ ಕ್ರಮವನ್ನು ಜರುಗಿಸಿರುತ್ತೇವೆ.

**5.** ಆರೋಪಿತೆ ಬಸಮ್ಮ ಹಲ್ಲೆ ಮಾಡಲು ಉಪಯೋಗಿಸಿದ ಒಂದು ರಕ್ತಸಿಕ್ತ ಮಚ್ಚು, ರಕ್ತಸಿಕ್ಕ ಗುಂಡುಕಲ್ಲು, ಒಂದು ಕಡೆ ಮೊಳೆ ಇರುವ ರಕ್ತಸಿಕ್ತ ರಿಪೀಸ್ ಪಟ್ಟಿ, ಇನ್ನೊಂದು ಒಡೆದು ಹೋದ ರಕ್ತಸಿಕ್ತ ರಿಪೀಸ್ ಪಟ್ಟಿ, ಮತ್ತೊಂದು ರಕ್ತಸಿಕ್ತ ಮರದ ಪಟ್ಟಿ, ಇವುಗಳನ್ನು ತೋರಿಸಿದ್ದು, ಅವುಗಳನ್ನು ಸ್ಥಳದಲ್ಲಿ ಬಿಳಿ ಬಟ್ಟೆಯಲ್ಲಿ ಹಾಕಿ **K** ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಅಲ್ಲದೇ ಸ್ಥಳದಲ್ಲಿ ರಕ್ತಸಿಕ್ತವಾದ ಕೆಂಪು,ಬಿಳಿ, ಹಳದಿ, ಹಸಿರು ಮತ್ತು ನೀಲಿ ಮಿಶ್ರಿತ ಡಿಸೈನ್ ನಿಂದ ಕೂಡಿದ ಟವೆಲ್, ನೀಲಿ,ಕಾಪಿ, ಬಿಳಿ ಮತ್ತು ಕಪ್ಪು ಮಿಶ್ರಿತ ರಕ್ತಸಿಕ್ತ ಲುಂಗಿ, ಒಂದು ಬಿಳಿ ಗೆರೆ ಉಳ್ಳ ರಕ್ತ ಸಿಕ್ತವಾದ ತುಂಬುತೋಳಿನ ಷರಟು, ಹಸಿರು ಬಣ್ಣದ 2 ಗಾಜಿನ ಬಳೆಯ ಚೂರುಗಳು ಮತ್ತು ಸ್ಥಳದಲ್ಲಿ ರಕ್ತ ಸಹಿತ ಮತ್ತು ರಕ್ತ ರಹಿತ ಮಣ್ಣುಗಳನ್ನು ಬಿಳಿ ಬಟ್ಟೆಯಲ್ಲಿ ಹಾಕಿ **K** ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸಾಕ್ಷಿಯು ಮಹಜರನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–2 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–2(ಬಿ) ಎಂದು ಗುರುತಿಸಲಾಯಿತು. ಮಹಜರ್ ಕಾಲದಲ್ಲಿ ಮಹಜರ್ ಕ್ರಮದ ಪೋಟೋಗಳನ್ನು ತೆಗೆಸಿರುತ್ತೇನೆ. ಸಾಕ್ಷಿಯು ಸದರಿ ಪೋಟೋಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ–3 ರಿಂದ

8 ಎಂದು ಗುರುತಿಸಲಾಗಿರುತ್ತದೆ. ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಮು,ಮಾಃ–1 ರಿಂದ 11 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

**6.** ನಂತರ ಮೃತದೇಹವನ್ನು ಕೆ.ಆರ್.ಆಸ್ಪತ್ರೆಗೆ ಸಿಬ್ಬಂದಿಗಳ ಬೆಂಗಾವಲಿನಲ್ಲಿ ಕಳುಹಿಸಿಕೊಟ್ಟಿರುತ್ತೇನೆ.

**7.** ನಂತರ ಆರೋಪಿತೆ ಬಸಮ್ಮನ ಜೊತೆಗೆ ಠಾಣೆಗೆ ವಾಪಸ್ಸು ಬಂದು ಸ್ಥಳದಲ್ಲಿ ಅಮಾನತ್ತುಪಡಿಸಿಕೊಂಡ ವಸ್ತುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ– 105/2023 ರಲ್ಲಿ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ.

**8.** ಆರೋಪಿತೆ ಬಸಮ್ಮರವರನ್ನು ಠಾಣೆಗೆ ಕರೆದುಕೊಂಡು ಬಂದ ನಂತರ ಬರುವಾಗ ಅವರ ಅಳಿಯ ಶಿವಣ್ಣನವರಿಗೆ ದಸ್ತಗಿರಿಯ ವಿಚಾರವನ್ನು ತಿಳಿಸಿ, ಸದರಿ ಬಸಮ್ಮರವರಿಗೆ ಬೇರೆ ಬಟ್ಟೆಗಳನ್ನು ತರಲು ತಿಳಿಸಿ ಅವರು ಬೇರೆ ಬಟ್ಟೆಯನ್ನು ತಂದಿದ್ದು, ಠಾಣೆಯಲ್ಲಿ ಬಸಮ್ಮರವರು ಧರಿಸಿದ್ದ ಬಟ್ಟೆಗಳು ರಕ್ತಸಿಕ್ತವಾಗಿದ್ದು, ಅವರ ಸೀರೆ, ಲಂಗ ಮತ್ತು ರವಿಕೆಯನ್ನು ಪಂಚರಾದ ಚಾ.ಸಾಃ3 ಮತ್ತು 4 ರವರ ಸಮಕ್ಷಮ ಮಹಜರ್ ಕ್ರಮವನ್ನು ರಾತ್ರಿ 1 ಗಂಟೆಯಿಂದ 1.30 ರವರೆಗೆ ಜರುಗಿಸಿ, ಬಿಳಿ ಬಟ್ಟೆಯಲ್ಲಿ ಹಾಕಿ **K** ಎಂಬ ಅಕ್ಷರದಿಂದ ಸೀಲ್ ಮಾಡಿ ಅಮಾನತ್ತುಪಡಿಸಿಕೊಂಡಿರುತ್ತೇನೆ. ಸದರಿ ವಸ್ತುಗಳನ್ನು ಠಾಣಾ ಮಾಲುಪಟ್ಟಿಸಂಖ್ಯೆ– 106/2023 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಅಮಾನತ್ತು ಮಹಜರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಶಾನೆ ಪಿ–10 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–10(ಸಿ) ಎಂದು

ಗುರುತಿಸಲಾಯಿತು. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸಬಲ್ಲೆ. ಸಾಕ್ಷಿಯು ಮು.ಮಾಃ-12 ರಿಂದ 14 ವಸ್ತುಗಳನ್ನು ನೋಡಿ ಗುರುತಿಸಿರುತ್ತಾರೆ.

**9.** ನಂತರ ಆರೋಪಿತೆ ಬಸಮ್ಮರವರನ್ನು ವೈದ್ಯಕೀಯ ಪರೀಕ್ಷೆಗೆ ಠಾಣಾ ಮಹಿಳಾ ಸಿಬ್ಬಂದಿ ಜೊತೆಗೆ ನಂಜನಗೂಡು ಸರ್ಕಾರಿ ಆಸ್ಪತ್ರೆಗೆ ಕಳುಹಿಸಿ ವೈದ್ಯಕೀಯ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ.

**10.** ನಂತರ ದಿಃ- 02.06.2023 ರಂದು ತನಿಖೆಯನ್ನು ಮುಂದುವರೆಸಿ, ಆರೋಪಿತೆ ಬಸಮ್ಮರವರನ್ನು ವೈದ್ಯಕೀಯ ಪರೀಕ್ಷೆಗೆ ಕರೆದುಕೊಂಡು ಹೋಗಿದ್ದ ಸಿಬ್ಬಂದಿಯವರು ಬಸಮ್ಮರವರಿಗೆ ಬಿಪಿ ಇದ್ದ ಕಾರಣ ಅವರಿಗೆ ಮಾತ್ರೆಯನ್ನು ನೀಡಿ, ರಾತ್ರಿ ಆಸ್ಪತ್ರೆಯಲ್ಲಿಯೇ ವಿಶ್ರಾಂತಿಯಲ್ಲಿ ಇರಿಸಿದ್ದರು ಎಂಬ ವಿಷಯವನ್ನು ತಿಳಿಸಿರುತ್ತಾರೆ. ನಂತರ ಅವರನ್ನು ಬೆಳಿಗ್ಗೆ ಠಾಣೆಗೆ ಕರೆದುಕೊಂಡು ಬಂದಿರುತ್ತಾರೆ. ನಂತರ ಅದೇ ದಿನ ಸದರಿ ಆರೋಪಿತೆ ಬಸಮ್ಮರವರನ್ನು ದಿಃ- 02.06.2023 ರಿಂದ 16.06.2023 ರವರೆಗೆ ನ್ಯಾಯಾಂಗ ಬಂಧನದಲ್ಲಿಡುವಂತೆ ರಿಮ್ಯಾಂಡ್ ಅರ್ಜಿಯ ಜೊತೆಗೆ ಮಹಿಳಾ ಪಿಎಸ್.ಐರವರ ಮುಖಾಂತರ ನ್ಯಾಯಾಲಯದ ಮುಂದೆ ಹಾಜರುಪಡಿಸಿರುತ್ತೇನೆ. ನಂತರ ಆರೋಪಿತೆ ಬಸಮ್ಮರವರನ್ನು ನ್ಯಾಯಾಂಗ ಬಂಧನಕ್ಕೆ ನೀಡಲಾಗಿರುತ್ತದೆ.

**11.** ನಂತರ ಸಿಬ್ಬಂದಿಯವರ ಜೊತೆಗೆ ಮೃತ ಚಿಕ್ಕರಾಚಶೆಟ್ಟರವರ ಶವ ತನಿಖೆಗಾಗಿ ಕೆ.ಆರ್.ಆಸ್ಪತ್ರೆಗೆ ಬೇಟಿ ನೀಡಿ ಅಲ್ಲಿ ಸಾಕ್ಷಿದಾರರಾದ ಚಾ.ಸಾಃ6, 7 ಮತ್ತು 9 ರವರ ಸಮಕ್ಷಮ ಹಾಗೂ ಮೃತರ ಸಂಬಂಧಿಗಳಾದ ಚಾ.ಸಾಃ5 ಮತ್ತು 8 ರವರ ಸಮಕ್ಷಮ ಮೃತದೇಹದ ಮೇಲೆ ಶವ ತನಿಖಾ ಮಹಜರನ್ನು ಜರುಗಿಸಿರುತ್ತೇನೆ. ಶವ ತನಿಖಾ ಕಾಲದಲ್ಲಿ

ಮೃತನ ಮೇಲೆ ಬಲಹುಬ್ಬಿನ ಹಣೆ ಮೇಲೆ ರಕ್ತದ ಗಾಯ, ಎಡಹುಬ್ಬು ಮತ್ತು ಹಣೆಯ ಬಳಿ ರಕ್ತದ ಗಾಯ, ಎಡಕೆನ್ನೆ ಮತ್ತು ಎಡಕಿವಿ ಹಿಂಭಾಗ ರಕ್ತದ ಗಾಯ, ಮುಖದ ಬಳಿ ಜಜ್ಜಿದಂತೆ ಗಾಯ, ಎಡಕೈನ ಕಿರುಬೆರಳು ಮತ್ತು ಉಂಗುರ ಬೆರಳು ಕತ್ತರಿಸಿದ ಗಾಯ, ಎಡಮಂಡಿಯಿಂದ ಪಾದದವರೆಗೆ ಆಸ್ಪತ್ರೆಯ ಬ್ಯಾಂಡೇಜ್ ಕಟ್ಟಿರುವುದು ಮತ್ತು ಬಲಮಂಡಿಯ ಬಳಿ ತರಚಿದ ಗಾಯ ಕಂಡು ಬಂದಿರುತ್ತದೆ.

**12.** ಮೃತದೇಹದ ಮೇಲೆ ಬಿಳಿ ಬಣ್ಣದತುಂಬು ತೋಳಿನ ಜುಬ್ಬ ಮತ್ತು ಬಿಳಿ ಬನಿಯನ್, ಬಿಳಿ ಮಾಸಲು ಒಳಉಡುಪು, ಒಂದು ಬಿಳಿ ಪಂಚೆ, ಉಡುದಾರ ಮತ್ತು ಬಟ್ಟೆ ಪಿನ್‌ಗಳಿದ್ದು, ಅವುಗಳು ರಕ್ತಸಿಕ್ತವಾಗಿದ್ದು ಕಂಡು ಬಂದಿರುತ್ತದೆ. ನಂತರ ಮಹಜರ್ ಕಾಲದಲ್ಲಿ ರಕ್ತ ಸಂಬಂಧಿಗಳಾದ ಚಾ.ಸಾಃ5 ಮತ್ತು 8 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಮಹಜರ್ ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಜರುಗಿಸಿ ಸಾಕ್ಷಿದಾರರ ಸಹಿ ಪಡೆದು ನನ್ನ ಸಹಿಯನ್ನು ಮಾಡಿರುತ್ತೇನೆ. ಸಾಕ್ಷಿ ಶವ ತನಿಖಾ ವರದಿಯನ್ನು ನೋಡಿ ಗುರುತಿಸಿದು, ಅದನ್ನು ಈಗಾಗಲೇ ನಿಶಾನೆ ಪಿ–11 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ನಿಶಾನೆ ಪಿ–11(ಡಿ) ಎಂದು ಗುರುತಿಸಲಾಯಿತು. ಶವ ತನಿಖಾ ಕಾಲದಲ್ಲಿ ಪೋಟೋಗಳನ್ನು ಸಹ ತೆಗೆಸಿರುತ್ತೇನೆ. ಸಾಕ್ಷಿಯು ಸದರಿ ಪೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ಅದನ್ನು ನಿಶಾನೆ ಪಿ–31 ಗುರುತಿಸಲಾಯಿತು.

**13.** ನಂತರ ಪಾರ್ಮ್ 146(1)(2) ನ್ನು ನೀಡಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗೆ ವೈದ್ಯಧಿಕಾರಿಯವರಿಗೆ ಕಳುಹಿಸಿಕೊಟ್ಟಿರುತ್ತೇನೆ. ವೈದ್ಯರು ಮೃತದೇಹವನ್ನು

ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ಮೃತನ ವಾರಸುದಾರರಿಗೆ ನೀಡಿ ಸ್ವೀಕೃತಿ ಪಡೆದುಕೊಂಡಿರುತ್ತೇನೆ. ನಂತರ ಚಾ.ಸಾಃ21 ಮತ್ತು 22 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

**14.** ನಂತರ ದಿಃ– 03.06.2023 ರಂದು ಮೃತ ಚಿಕ್ಕರಾಚಶೆಟ್ಟಿಯವರ 2 ನೇ ಹೆಂಡತಿ ಜಯಮ್ಮರವರ ಮಕ್ಕಳಾದ ಚಾ.ಸಾಃ2 ಮತ್ತು 10 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

**15.** ನಂತರ ದಿಃ–12.06.2023 ರಂದು ಪ್ರಕರಣದ ತನಿಖೆಯನ್ನು ಮುಂದುವರೆಸಿ, ಚಾ.ಸಾಃ23 ರವರು ಮೃತನ ಬಾಬ್ತು ವಿಸೆರಾ, ಇತರೆ ವಸ್ತುಗಳು ಮತ್ತು ಮರಣೋತ್ತರ ಪರೀಕ್ಷೆಯ ವರದಿಯನ್ನು ತಂದು ಹಾಜರುಪಡಿಸಿದ್ದು, ಅದನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಮರಣೋತ್ತರ ಪರೀಕ್ಷೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–22 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–22(ಡಿ) ಎಂದು ಗುರುತಿಸಲಾಯಿತು. ಚಾ.ಸಾಃ23 ರವರು ತಂದು ಹಾಜರುಪಡಿಸಿದ ವಿಸೆರಾ ಮತ್ತು ಮೃತನ ಬಟ್ಟೆಗಳು ಮತ್ತು ಇತರೆ ವಸ್ತುಗಳು ಒಟ್ಟು 1 ರಿಂದ 11 ವಸ್ತುಗಳನ್ನು ಪಡೆದುಕೊಂಡು ಠಾಣಾ ಮಾಲುಪಟ್ಟಿ ಸಂಖ್ಯೆ– 111/2023 ರಲ್ಲಿ ಅಳವಡಿಸಿಕೊಂಡಿರುತ್ತೇನೆ.

**16.** ನಂತರ ದಿಃ–14.06.2023 ರಂದು ಪ್ರಕರಣದಲ್ಲಿ ವಶಪಡಿಸಿಕೊಂಡ ಠಾಣಾ ಮಾಲುಪಟ್ಟಿ ಸಂಖ್ಯೆ– 105/2023, 106/2023 ಮತ್ತು 111/2023 ರಲ್ಲಿ

ಅಳವಡಿಸಿದ ವಸ್ತುಗಳನ್ನು ಸಮುಚಿತ ಮಾರ್ಗದಲ್ಲಿ ಮೈಸೂರು **RFSL** ಗೆ ಚಾ.ಸಾಃ23 ರವರ ಮೂಲಕ ರಾಸಾಯನಿಕ ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ.

**17.** ಈ ಪ್ರಕರಣದಲ್ಲಿ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ತಯಾರಿಸಿಕೊಡುವಂತೆ ಲೋಕೋಪಯೋಗಿ ಇಲಾಖೆ ಇಂಜಿನಿಯರ್ ರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದು ಮತ್ತು ಕೃತ್ಯ ನಡೆದ ಸ್ಥಳದ ದಾಖಲೆಗಳನ್ನು ಹಾಜರುಪಡಿಸುವಂತೆ ಕೂಡ್ಲಪುರ ಗ್ರಾಮ ಪಂಚಾಯಿತಿಯ ಪಿಡಿಒರವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಅದೇ ದಿನ ಚಾ.ಸಾಃ23 ರವರು ವಸ್ತುಗಳನ್ನು **RFSL** ಗೆ ನೀಡಿ ಸ್ವೀಕೃತಿಯನ್ನು ತಂದು ಹಾಜರುಪಡಿಸಿರುತ್ತಾರೆ.

**18.** ನಂತರ ದಿಃ– 20.06.2023 ರಂದು 1 ನೇ ಆರೋಪಿ ಶಿವನಾಗು ತಾನೇ ಸ್ವತಃ ನ್ಯಾಯಾಲಯಕ್ಕೆ ತನ್ನ ವಕೀಲರ ಮುಖಾಂತರ ಶರಣಾಗಿರುತ್ತಾನೆಂದು ನ್ಯಾಯಾಲಯದ ಕರ್ತವ್ಯದಲ್ಲಿದ್ದ ಪಿಸಿ ನಾಗರಾಜುರವರು ತಿಳಿಸಿದ್ದು, ನ್ಯಾಯಾಲಯದ ಆದೇಶದಂತೆ 1 ನೇ ಆರೋಪಿಯನ್ನು ನಂಜನಗೂಡು ಕಾರಾಗೃಹಕ್ಕೆ ಕಳುಹಿಸಿರುವುದಾಗಿ ತಿಳಿಸಿರುತ್ತಾನೆ.

**19.** ನಂತರ ದಿಃ–22.06.2023 ರಂದು ತನಿಖೆ ಮುಂದುವರೆಸಿ, 1 ನೇ ಆರೋಪಿಯನ್ನು ತನಿಖೆಗೆ ಸಂಬಂಧ ಪೊಲೀಸ್ ವಶಕ್ಕೆ ನೀಡುವಂತೆ ಮಾನ್ಯ ನ್ಯಾಯಾಲಯಕ್ಕೆ ಕೋರಿಕೆ ಪತ್ರವನ್ನು ಸಲ್ಲಿಸಿದ್ದು, ನ್ಯಾಯಾಲಯವು 1 ನೇ ಆರೋಪಿಯನ್ನು ದಿಃ– 22.06.2023 ರ ಸಂಜೆ 4 ಗಂಟೆಯಿಂದ 23.06.2023 ರ ಸಂಜೆ 5.30 ರವರೆಗೆ ಪೊಲೀಸ್ ವಶಕ್ಕೆ ನೀಡಿರುತ್ತಾರೆ. ನಂತರ 1 ನೇ ಆರೋಪಿಯನ್ನು ವಶಕ್ಕೆ ಪಡೆದು ಸೂಕ್ತ ಬೆಂಗಾವಲಿನಲ್ಲಿ ಠಾಣೆಯಲ್ಲಿ ಇರಿಸಿರುತ್ತೇನೆ.

**20.** ದಿಃ– **23.06.2023** ರಂದು ಬೆಳಿಗ್ಗೆ **11** ಗಂಟೆ ಸಮಯದಲ್ಲಿ **1** ನೇ ಆರೋಪಿ ಶಿವನಾಗುವನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ಆರೋಪಿಯನ್ನು ಕೂಲಂಕುಷವಾಗಿ ವಿಚಾರಣೆ ಮಾಡಿ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ವಿಚಾರಣಾ ಕಾಲದಲ್ಲಿ ಆತ ಕೃತ್ಯ ಎಸಗಿರುವುದು ದೃಡಪಟ್ಟಿದ್ದು, ನಂತರ ಆತನನ್ನು ನ್ಯಾಯಾಂಗ ಬಂಧನಕ್ಕೆ ನೀಡಿರುತ್ತೇನೆ.

**21.** ದಿಃ– **24.06.2023** ರಂದು ಸದರಿ ಪ್ರಕರಣದ ಸಾಕ್ಷಿದಾರರಾದ ಚಾ.ಸಾಃ11, 12 ರವರನ್ನು ವಿಚಾರಣೆಯನ್ನು ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾ.ಸಾಃ11 ಮತ್ತು 12 ರವರು ನಿಶಾನೆ ಪಿ–13 ಮತ್ತು 14 ರಂತೆ ನನ್ನ ಸಮಕ್ಷಮ ಹೇಳಿಕೆಯನ್ನು ನೀಡಿರುತ್ತಾರೆ.

**22.** ದಿಃ–01.07.2023 ರಂದು ತನಿಖೆಯನ್ನು ಮುಂದುವರೆಸಿ, **RFSL** ಮೈಸೂರಿನಿಂದ ವಿಸೆರಾವನ್ನು ಹೊರತುಪಡಿಸಿ ಉಳಿದ ವಸ್ತುಗಳಿಗೆ ಸಂಬಂಧಪಟ್ಟ ವರದಿಯನ್ನು ಈ–ಮೇಲ್ ಮುಖಾಂತರ ಸ್ವೀಕರಿಸಿದ್ದು, ಅದನ್ನು ಡೌನ್ ಲೋಡ್ ಮಾಡಿ ಪ್ರಿಂಟ್ ತೆಗೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ **FSL** ವರದಿಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–21 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–21(ಸಿ) ಎಂದು ಗುರುತಿಸಲಾಯಿತು ಹಾಗೂ ಅದೇ ದಿನ ವಿಸೆರಾಗೆ ಸಂಬಂಧಪಟ್ಟ ವರದಿಯನ್ನು ಈ–ಮೇಲ್ ಮುಖಾಂತರ ಸ್ವೀಕರಿಸಿದ್ದು, ಅದನ್ನು ಡೌನ್ ಲೋಡ್ ಮಾಡಿ ಪ್ರಿಂಟ್ ತೆಗೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–27 ಎಂದು

ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–27(ಎ) ಎಂದು ಗುರುತಿಸಲಾಯಿತು.

**23.** ದಿಃ– 04.07.2023 ರಂದು ಪ್ರಕರಣದಲ್ಲಿ ಸಾಕ್ಷಿದಾರರಾದ ಚಾ.ಸಾಃ13, 14, 15 ಮತ್ತು 16 ರವರನ್ನು ವಿಚಾರಣೆ ಮಾಡಿ ಅವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಚಾ.ಸಾಃ13 ರಿಂದ 16 ರವರು ನಿಶನಾ ಪಿ–16 ರಿಂದ 19 ರಂತೆ ನನ್ನ ಸಮಕ್ಷಮ ಹೇಳಿಕೆಗಳನ್ನು ನೀಡಿರುತ್ತಾರೆ.

**24.** ದೀ– 13.07.2023 ರಂದು ಲೋಕೋಪಯೋಗಿ ಇಲಾಖೆಯಿಂದ ಕೃತ್ಯ ನಡೆದ ಸ್ಥಳದ ನಕಾಶೆಯನ್ನು ಪಡೆದುಕೊಂಡು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ನಕಾಶೆಯನ್ನುನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ–20 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯು ಲೋಕೋಪಯೋಗಿ ಇಲಾಖೆಯ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಶಾನೆ ಪಿ–32 ಎಂದು, ಸಾಕ್ಷಿಯ ಸಹಿಯನ್ನು ನಿಶಾನೆ ಪಿ–32(ಎ) ಎಂದು ಗುರುತಿಸಲಾಯಿತು.

**25.** ಅದೇ ದಿನ ಸಾಕ್ಷಿದಾರರಾದ ಚಾ.ಸಾಃ11 ಮತ್ತು 12 ರವರ ಕಲಂ 164 ಸಿ.ಆರ್.ಪಿಸಿ ಅಡಿಯ ಹೇಳಿಕೆಗಳನ್ನು ನ್ಯಾಯಾಲಯದಿದಂ ಪಡೆದುಕೊಂಡು ಹಾಜರುಪಡಿಸಿದ್ದು, ಅವುಗಳನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಸಾಕ್ಷಿಯು ಹೇಳಿಕೆಗಳನ್ನು ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೇ ನಿಶಾನೆ ಪಿ–12 ಮತ್ತು 15 ಎಂದು ಗುರುತಿಸಲಾಗಿರುತ್ತದೆ.

**26.** ದಿಃ-**25.07.2023** ರಂದು ಮೃತನ ಸಾವಿಗೆ ಸಂಬಂಧಪಟ್ಟಂತೆ ಹೆಚ್ಚುವರಿ ವರದಿ ಮತ್ತು ಅಂತಿಮ ವರದಿಯನ್ನು ನೀಡುವಂತೆ ವೈದ್ಯಾಧಿಕಾರಿಯವರಿಗೆ ಕೋರಿಕೆ ಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಕೋರಿಕೆ ಪತ್ರದ ಜೊತೆಗೆ ಮರಣುೋತ್ತರ ಪರೀಕ್ಷೆಯ ವರದಿ ಮತ್ತು ಕೃತ್ಯದಲ್ಲಿ ಬಳಸಲಾಗಿರುವ ಮಚ್ಚು, ರಿಪೀಸ್ ಪಟ್ಟಿಗಳು ಮತ್ತು ಗುಂಡುಕಲ್ಲನ್ನು ಪರೀಕ್ಷೆಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಕೋರಿಕೆ ಪತ್ರದಲ್ಲಿ ಆರೋಪಿತ ಮೃತನಿಗೆ ಮಚ್ಚಿನಿಂದ ಹಲ್ಲೆಗೆ ಮಾಡಿದಾಗ ಯಾವ ಗಾಯಗಳಾಗುತ್ತದೆ, ಅದೇ ರೀತಿ ಆರೋಪಿತರು ಮೃತನಿಗೆ ರಿಪೀಸ್ ಪಟ್ಟಿಗಳಿಂದ ಹಲ್ಲೆ ಮಾಡಿದಾಗ ಯಾವ ಗಾಯಗಳಾಗುತ್ತವೆ, ಗುಂಡು ಕಲ್ಲಿನಿಂದ ಹಲ್ಲೆ ಮಾಡಿದರೆ ಯಾವ ಗಾಯಗಳಾಗುತ್ತವೆ, ಆರೋಪಿತರು ಮೃತನಿಗೆ ಮಚ್ಚು, ರಿಪೀಸ್ ಪಟ್ಟಿಗಳು, ಗುಂಡು ಕಲ್ಲಿನಿಂದ ಹಲ್ಲೆ ಮಾಡಿದರೆ ಮರಣೋತ್ತರ ಪರೀಕ್ಷೆಯಲ್ಲಿ ನಮೂದಿಸಿದ ಗಾಯಗಳು ಆಗುತ್ತವೆಯೇ ಎಂಬುದರ ಬಗ್ಗೆ ಅಭಿಪ್ರಾಯವನ್ನು ನೀಡುವಂತೆ ಕೇಳಿಕೊಂಡಿರುತ್ತೇನೆ. ಆ ಪ್ರಕಾರ ವೈದ್ಯಾಧಿಕಾರಿಯವರು ದಿಃ-**25.07.2023** ರಂದು ಹೆಚ್ಚಿನ ಅಭಿಪ್ರಾಯವನ್ನು ನೀಡಿದ್ದು, ಸದರಿ ವೈದ್ಯಾಧಿಕಾರಿಗಳು ಮೃತನ ಸಾವಿಗೆ ಬಗ್ಗೆ ಅಂತಿಮ ಅಭಿಪ್ರಾಯವನ್ನು ನೀಡಿದ್ದು, ಅದೇ ರೀತಿ ಆರೋಪಿತರು ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳಾದ ಮಚ್ಚು, ರಿಪೀಸ್ ಪಟ್ಟಿ ಮತ್ತು ಗುಂಡುಕಲನ್ನು ಪರಿಶೀಲಿಸಿ, ಮೃತನ ಮರಣೋತ್ತರ ಪರೀಕ್ಷೆಯಲ್ಲಿ ನಮೂದಿಸಿದ ಗಾಯಗಳು ಮೇಲೆ ಹೇಳಿದ ವಸ್ತುಗಳಿಂದ ಹಲ್ಲೆ ಮಾಡಿದರೆ ಆಗುವ ಸಾಧ್ಯತೆಗಳಿರುತ್ತವೆ ಎಂದು ಅಭಿಪ್ರಾಯ ವರದಿಯನ್ನು ನೀಡಿರುತ್ತಾರೆ. ಸಾಕ್ಷಿಯು ಅಂತಿಮ ಅಭಿಪ್ರಾಯವನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಶಾನೆ ಪಿ-22(ಬಿ) ಎಂದು ಗುರುತಿಸಲಾಗಿರುತ್ತದೆ.

ಸಾಕ್ಷಿಯು ಆಯುಧಗಳನ್ನು ಪರಿಶೀಲಿಸಿ ನೀಡಿದ ಹೆಚ್ಚಿನ ಅಭಿಪ್ರಾಯವನ್ನು ಈಗಾಗಲೇ ನಿಶಾನೆ ಪಿ–24 ರಿಂದ 26 ಎಂದು ಗುರುತಿಸಲಾಗಿರುತ್ತದೆ. ಸಾಕ್ಷಿಯ ಸಹಿಯನ್ನು ನಿಶಾನೆ ಪಿ–24(ಬಿ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ಕೋರಿಕೆ ಮೇರೆಗೆ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಿಸಲಾಯಿತು)

**ಓ ಹೇ ಕೇ ಸ ಇ ಎ ಒ**

**Sd/-**

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರು,**
**ಮೈಸೂರು.**